clima FILM FEST'14 September 11 – 13 2014

| Name of Publication | Edition | Date |
|---|---|---|
| Sanje Samachar | Bangalore | September 15, 2014 |

Ennovate Global and Good Relations India in partnership with United Nations Foundation host Clima Film Fest '14

## ವಿಶ್ವಸಂಸ್ಥೆ ಪ್ರತಿಷ್ಠಾನದ ಪಾಲುದಾರಿಕೆಯಲ್ಲಿ ಎನ್ನೋವೇಟ್ ಗ್ಲೋಬಲ್ ಮತ್ತು ಗುಡ್‌ರಿಲೇಷನ್ಸ್ ಇಂಡಿಯಾದಿಂದ ಕ್ಲೈಮಾ ಫಿಲ್ಮ್ ಫೆಸ್ಟ್ 2014ರ ಆತಿಥ್ಯ




**ಬೆಂಗಳೂರು:** ಹವಾಮಾನ ಬದಲಾವಣೆ ಕುರಿತ ಚರ್ಚೆ ವಿಶ್ವವ್ಯಾಪಿಯಾಗಿ ನೂತನ ಔನ್ನತ್ಯದಲ್ಲಿ ರುವಂತೆ ಹವಾಮಾನ ಬದಲಾವಣೆಯ ಸಂಶೋಧ
ುತ್ತು ಸಂವಹನದಲ್ಲಿ ವಿಶೇಷಜ್ಞ ರಾದ ಎನ್ನೋವೇಟ್ ಗ್ಲೋಬಲ್ ಹಾಗೂ ಯೋಜನಾತ್ಮಕ ಸಂವಹನ ಸಲಹಾಕಾರ ಸಂಸ್ಥೆಯಾಗಿರುವ ಗುಡ್‌ರಿಲೇಷನ
ಂಡಿಯಾ ಈಗ ವಿಶ್ವಸಂಸ್ಥೆ ಪ್ರತಿಷ್ಠಾನದೊಂದಿಗಿನ ಪಾಲುದಾರಿಕೆಯಲ್ಲಿ ಕ್ಲೈಮಾ ಫಿಲ್ಮ್ ಫೆಸ್ಟ್ 2014 ಎಂಬ ಚಲನಚಿತ್ರೋತ್ಸವಕ್ಕೆ ಆತಿಥ್ಯ ವಹಿಸುತ್ತಿ
ಾರತದಲ್ಲಿ ಹವಾಮಾನ ಬದಲಾವಣೆ ಕುರಿತು ಜಾಗೃತಿಯನ್ನು ವಿಸ್ತರಿಸಲು ಈ ಕಾರ್ಯಕ್ರಮ ಆಯೋಜಿಸಲಾಗಿದೆ.

ಮೂರು ದಿನಗಳ ಈ ಮೆಗಾ ಕಾರ್ಯಕ್ರಮ ಚೆನ್ನೈನ ಎಂ.ಒ.ಪಿ ವೈಷ್ಣವ್ ಕಾಲೇಜ್ ಫಾರ್ ವುಮೆನ್‌ನಲ್ಲಿ ಸೆಪ್ಟೆಂಬರ್ 12–13, 2014ರಂದ
ಡೆಯಲಿದೆ. ತಮಿಳುನಾಡಿನ ರಾಜ್ಯಪಾಲರಾದ ಡಾ॥ ಕೆ. ರೋಸಯ್ಯ ಅವರು ಚೆನ್ನೈನ ರಾಜಭವನದಲ್ಲಿ ಈ ಕಾರ್ಯಕ್ರಮವನ್ನು ಸೆಪ್ಟೆಂಬರ್ 1
014ರಂದು ಉದ್ಘಾಟಿಸಿದರು. ಮೂರು ಸಾವಿರಕ್ಕೂ ಹೆಚ್ಚಿನ ನೋಂದಾಯಿತ ಭಾಗವಹಿಸುವವರು, 16 ಫಿಲ್ಮ್‌ಗಳ ಪ್ರದರ್ಶನ, 14 ಸಮಸ್ಯೆಗಳ ಕ
ಮನ, 13 ವಾತಾವರಣ ಮತ್ತು 12 ಮಾಧ್ಯಮ ಪರಿಣಿತರು, 12 ಚಲನಚಿತ್ರ ತಯಾರಕರು, ಭಾರತದ ವಿವಿಧ ಕಡೆಯ 10ಕ್ಕೂ ಹೆಚ್ಚಿನ ಸ್ಥಳಗ
ವಿಷ್ಕಾರ,ಹಲವಾರು ಅಂತಾರಾಷ್ಟ್ರೀಯ ವೇದಿಕೆಗಳ ಪ್ರದರ್ಶನ, 6 ಪಾಲುದಾರರು, 4 ಸ್ಥಳಗಳು, 4 ಥಿಮ್ಯಾಟಿಕ್ ಸೆಷನ್‌ಗಳು, 4 ಫಿಲ್ಮ್ ಸೆಷನ್‌ಗಳು,
ುತ್ಸವದದಿನಗಳು ಮತ್ತು 1 ಎನ್‌ಕಾಂಪಾಸಿಂಗ್ ಪ್ಲಾಟ್‌ಫಾರಂನೊಂದಿಗೆ ಕ್ಲೈಮಾ ಫಿಲ್ಮ್ ಫೆಸ್ಟ್ 2014 ಭಾರತದ ವಿವಿಧ ಕಡೆಯ ಆಸಕ್ತಿಕರ ಕಥೆಗ
ಂಗ್ರಹವನ್ನು ಸಾದರಪಡಿಸುತ್ತಿದೆ. ಭಾರತದ ಅತ್ಯಂತ ಪರಿಣಿತಗಣ್ಯರಿಂದ ಈ ವಾತಾವರಣ ಬದಲಾವಣೆಯ ನೈಜ ಪರಿಣಾಮ ಕುರಿತ ನಿದರ್ಶನಗಳನ
ತ್ತಿ ತೋರಿಸಲಾಗುತ್ತಿದೆ. ತಮಿಳುನಾಡಿನ ರಾಜ್ಯಪಾಲರಾದ ಡಾ॥ ಕೆ. ರೋಸಯ್ಯ ಅವರು ಮಾತನಾಡಿ, ಜನರಲ್ಲಿ ಜಾಗೃತಿ ಮೂಡಿಸುವುದು ಇಂದಿ
ಗತ್ಯವಾಗಿದೆ. ನಮ್ಮ ಪರಿಸರವನ್ನು ಸಂರಕ್ಷಿಸಲು ನಾವು ನೂತನ ಯೋಜನೆಗಳನ್ನು ಅಭಿವೃದ್ಧಿಪಡಿಸಬೇಕಾಗಿದೆ. ಈ ತೊಂದರೆಗಳನ್ನು ನಿಭಾಯಿಸಲ
ರ್ಕಾರಗಳು ನೀತಿಗಳನ್ನು ರೂಪಿಸುತ್ತಿದ್ದರೆ ಪ್ರತಿಯೊಬ್ಬರೂ ಪ್ರಾಥಮಿಕ ಹೊಣೆಗಾರಿಕೆಯನ್ನು ಪ್ರದರ್ಶಿಸಬೇಕಾಗಿದೆ. ಭಾರತ ಹಲವಾರು ವೈಪರಿತ್ಯಗಳನ
ಾಡಿದೆ. ಇವುಗಳಲ್ಲಿ ಬಹುತೇಕ ಮಾನವ ನಿರ್ಮಿತವೇ ಆಗಿದೆ. ಈ ಹಿನ್ನೆಲೆಯಲ್ಲಿ ಪ್ರಸಕ್ತ ಚಲನಚಿತ್ರ ಉತ್ಸವದ ಎಲ್ಲಾ ಪಾಲುದಾರರಿಗೆ ನಾನ
ಯಶಸ್ಸನ್ನು ಕೋರುತ್ತೇನೆ ಎಂದರು. ಎನ್ನೋವೇಟ್ ಗ್ಲೋಬಲ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಅಲ್ಕಾ ತೋಮರ್ ಅವರು ಈ ಸಂದರ್ಭದಲ್
ಾತನಾಡಿ, ಹವಾಮಾನದಲ್ಲಿನ ಬದಲಾವಣೆ ಐತಿಹಾಸಿಕವಾದ ಕಾರ್ಯಕ್ರಮವಾಗಿದ್ದು, ಇದು ನಿಜವಾದದ್ದು ಮತ್ತು ಮಾನವ ನಿರ್ಮಿತ ಎಂಬುದನ್ನು ನಾವ
ದುಕೊಳ್ಳುವುದು ಮುಖ್ಯವಾಗಿದೆ. ಇದರ ಪರಿಣಾಮವನ್ನು ಕಡಿಮೆ ಮಾಡಲು ನಾವು ಪ್ರತಿ ಕ್ರಮವನ್ನು ಕೈಗೊಳ್ಳಬೇಕು. ಉದ್ಯಮ ಸಮುದಾಯ
ಮಾಜ, ಸರ್ಕಾರ, ಪರಿಸರ ಸಂಬಂಧಿ ಸಂಸ್ಥೆಗಳ ಎಲ್ಲರನ್ನು ಈ ಚಲನ ಚಿತ್ರೋತ್ಸವದ ಮೂಲಕ ತಲುಪಲು ನಾವು ಇಚ್ಛಿಸುತ್ತೇವೆ ಎಂದರು
ಡ್‌ರಿಲೇಷನ್ಸ್ ಇಂಡಿಯಾದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ದೀಪಕ್ ಅವರು ಮಾತನಾಡಿ, ಹವಾ ಮಾನ ಬದಲಾವಣೆ ನಮ್ಮ ಕಾಲದಲ್ಲಿ ಅತ್ಯಂ
ಣವಾದ ಜಾಗತಿಕ ಸವಾಲುಗಳಲ್ಲಿ ಒಂದಾಗಿದೆ. ಹವಾಮಾನ ಬದಲಾವಣೆಯ ಭೌತಿಕ ಸಾಕ್ಷಿಗಳು ನಮ್ಮ ಮುಂದಿವೆ.

ಚ್ಚಿನ ಜನರ ಮೇಲೆ ಇವುಗಳು ಉಂಟು ಮಾಡುವ ಪರಿಣಾಮ ಕುರಿತು ಸಾರ್ವಜನಿಕರಿಗೆ ತಿಳಿಸಬೇಕಾಗಿದೆ. ನಾಗರಿಕ ಸಮುದಾಯ, ಉದ್ಯಮ ಮತ
ಿಸರವಾದಿಗಳು ಈ ವಿಷಯದಲ್ಲಿ ಪ್ರಮುಖ ಪಾತ್ರ ವಹಿಸುತ್ತಾರೆ ಎಂಬುದನ್ನು ಅರಿತುಕೊಳ್ಳಬೇಕು. ವಿವಿಧ ಗುಂಪುಗಳನ್ನು ತಲುಪಲು ಈ ಅಭಿಯಾ
ದ್ದೇಶ ಹೊಂದಿದ್ದು ಸಮಸ್ಯೆಯ ಗಂಭೀರತೆಯನ್ನು ಅರ್ಥ ಮಾಡಿಕೊಳ್ಳಲು ಅವರಿಗೆ ನೆರವಾಗಲಿದೆ ಎಂದರು. ಈ ಕಾರ್ಯಕ್ರಮಕ್ಕೆ ಖ್ಯಾತ ಪರಿಸರ ಮತ
ಕ್ಷಣಿಕ ಸಂಸ್ಥೆಗಳಾದ ಸಿಪಿಆರ್ ಎನ್ವಿರಾನ್‌ಮೆಂಟಲ್ ಎಜುಕೇಷನ್ ಸೆಂಟರ್(ಸಿಪಿಆರ್‌ಇಇಸಿ), ಪಾನೋಸ್ ಸೌತ್ ಏಷ್ಯಾ ಮತ್ತು ಎಂ.ಒ.ಪಿ ವೈಷ್ಣವ
ಲೇಜ್ ಫಾರ್ ವುಮೆನ್ ಬೆಂಬಲ ನೀಡಿವೆ. ಸೆಪ್ಟೆಂಬರ್ 23, 2014ರಲ್ಲಿ ವಿಶ್ವಸಂಸ್ಥೆಯ ಕೇಂದ್ರ ಕಚೇರಿಯಲ್ಲಿ ಹವಾಮಾನ ಶೃಂಗ ನಡೆಯು
ನ್ನೆಲೆಯಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ.